Date : 15-9-2015

# ಅಬೇರ್ಸ್‌ನಿಂದ ಸಕ್ಕರೆ ಕ್ಯಾರಿಓವರ್ ದಾಸ್ತಾನು ಹೆಚ್ಚಳದ ಅಂದಾಜು ಸಕ್ಕರೆ ಜಾಗತಿಕ ದರ 11 ವರ್ಷಗಳಲ್ಲೇ ಕನಿಷ್ಠ

ಕ್ಯಾರಿ ಓವರ್ ಇನ್‌ವೆಂಟರಿ ದಾಸ್ತಾನು ಹೆಚ್ಚಳದ ನಿರೀಕ್ಷೆಯಿಂದ ಸಕ್ಕರೆ ಜಾಗತಿಕ ದರ ಹಿಂದಿನ 11 ವರ್ಷಗಳಲ್ಲೇ ಕನಿಷ್ಠ ಮಟ್ಟಕ್ಕಿಳಿಯುವ ಸಂಭವವಿದೆಯೆಂದು ಆಸ್ಟ್ರೇಲಿಯಾದ ಸರಕಾರಿ ಏಜೆನ್ಸಿಯಾದ ಅಲೇರ್ಸ್ ನಿರೀಕ್ಷೆ ಮಾಡಿದೆ. ಅದು 2015–16 ನೇ ಸೀಜನ್‌ನ ಕಚ್ಚಾ ಸಕ್ಕರೆ ದರ ಪೌಂಡ್‌ಗೆ 10 ಸೆಂಟ್ಸ್‌ಗೆ ಇಳಿಕೆಯಾಗಬಹುದೆನ್ನುತ್ತಿದೆ. ಜೂನ್ ತಿಂಗಳಲ್ಲಿ ಪೌಂಡ್‌ನ 13 ಸೆಂಟ್ಸ್ ದರವಿರಬಹುದೆಂದು ಮುನ್ಸೂಚನೆ ನೀಡಿತ್ತು. 2014–15ರ ಸರಾಸರಿ ಕಚ್ಚಾ ಸಕ್ಕರೆ ದರ ಪೌಂಡ್‌ಗೆ 14 ಸೆಂಟ್ಸ್ ಇತ್ತೆಂದು ಏಜೆನ್ಸಿ ತಿಳಿಸಿದೆ. 2014–15 ಸಕ್ಕರೆ ಇನ್‌ವೆಂಟರಿ ಜಾಗತಿಕ ದಾಸ್ತಾನು ದಾಖಲೆ ಹೆಚ್ಚಳವಿರಲಿದೆಯೆನ್ನಲಾಗಿದೆ.

ಅಬೋರ್ಸ್ 2015–16ನೇ ಸಾಲಿನ ಸಕ್ಕರೆ ಉತ್ಪಾದನೆಯ ಅಂದಾಜನ್ನು 182.6 ಮಿಲಿಯನ್ ಟನ್‌ಗಳಿಂದ 182.0 ಮಿಲಿಯನ್ ಟನ್‌ಗಳಿಗೆ ಇಳಿಸಿದೆ. ಹಿಂದಿನ ವರ್ಷದ ಉತ್ಪಾದನೆ 183 ಮಿಲಿಯನ್ ಟನ್ ಆಗಿತ್ತು. ಸಕ್ಕರೆ ಬಳಕೆ 2 ಶೇಕಡಾ ವೃದ್ಧಿ ಹೊಂದಿ 184.7 ಮಿಲಿಯನ್ ಟನ್‌ಗೆ ನಿರೀಕ್ಷಿಸಿದ್ದು, ಇದು ಜೂನ್ ತಿಂಗಳಲ್ಲಿ ಮುನ್ಸೂಚನೆ ನೀಡಿದಷ್ಟೆ ಇದೆ. ಉತ್ಪಾದನೆಗಿಂತ ಬೇಡಿಕೆ ಹೆಚ್ಚಳವಾಗಿ 2.7 ಮಿಲಿಯನ್ ಟನ್ ಸಕ್ಕರೆ ಕೊರತೆ ಉಂಟಾಗಲಿದೆಯೆಂದು ನಿರೀಕ್ಷಿಸಿದೆ. ಅಂತರಾಷ್ಟ್ರೀಯ ಸಕ್ಕರೆ ಸಂಸ್ಥೆಯ ಪ್ರಕಾರ ಕೊರತೆ 2.5 ಮಿಲಿಯನ್ ಟನ್‌ಗಳು.

ಹೆಚ್ಚಿನ ಮಟ್ಟದ ಉತ್ಪಾದನಾ ಕೊರತೆ ಉಂಟಾದರೂ, ಹಿಂದಿನ ಸಾಲಿನ ಕ್ಯಾರಿ ಓವರ್ ದಾಸ್ತಾನಿನ ಪ್ರಭಾವ ದರದ ಮೇಲಾಗಲಿದೆಯೆನ್ನಲಾಗಿದೆ. ಪುನರಂದಾಜಿಸಿದ ಅಬೇರ್ಸ್ ಅಂದಾಜಿನಂತೆ 2014–15ನೇ ಸಾಲಿನ ಕ್ಯಾರಿಓವರ್ ದಾಸ್ತಾನು 2.6 ಮಿಲಿಯನ್ ಟನ್‌ಗಳಷ್ಟು ಹೆಚ್ಚಳಮಾಡಿದೆ. ಇದರ ಪ್ರಕಾರ 2015–16 ಸಾಲಿನ ಆರಂಭಿಕ ದಾಸ್ತಾನು 76.8 ಮಿಲಿಯನ್ ಟನ್‌ಗಳಿಂದ 78.1 ಮಿಲಿಯನ್ ಟನ್‌ಗಳಿಗೆ ಹೆಚ್ಚಳವಾಗಬಹುದು. ಜಾಗತಿಕ ಸಕ್ಕರೆ ವ್ಯವಹಾರದಲ್ಲಿ ಭಾರತ, ಥೈಲ್ಯಾಂಡ್ ಮತ್ತು ಆಸ್ಟ್ರೇಲಿಯಾಗಳ ರಫ್ತು ಮಾಡಬಹುದಾದ ದಾಸ್ತಾನು ಹೆಚ್ಚಳವಾಗಿ ಜಾಗತಿಕ ರಫ್ತು ವ್ಯವಹಾರ 3 ಶೇಕಡಾ ಹೆಚ್ಚಳವಾಗಿ 61 ಮಿಲಿಯನ್ ಟನ್‌ಗಳಾಗ ಬಹುದೆನ್ನಲಾಗಿದೆ. ಥೈಲ್ಯಾಂಡ್‌ನ ರಫ್ತು 12 ಶೇಕಡಾ ವೃದ್ಧಿಯಾಗಿ ದಾಖಲೆ 9.5 ಮಿಲಿಯನ್ ಟನ್‌ಗಳಾಗ ಬಹುದೆನ್ನಲಾಗಿದೆ. ಚೈನಾ, ಇಂಡೋನೇಶಿಯಾ ಮತ್ತು ಮಲೇಶ್ಯಾಗಳಲ್ಲಿ ಸಕ್ಕರೆ ಉತ್ಪಾದನೆ ಕಡಿಮೆಯಾಗುವ ಮುನ್ಸೂಚನೆ ನೀಡಿದೆ. ಏಜೆನ್ಸಿಯಾ ಮುನ್ಸೂಚನೆಯಂತೆ ಭಾರತದ ಸಕ್ಕರೆ ರಫ್ತು 28 ಶೇಕಡಾ ವೃದ್ಧಿಯಾಗಿ 2015–16 ರಲ್ಲಿ 3.2 ಮಿಲಿಯನ್ ಟನ್‌ಗಳಾಗ ಬಹುದೆನ್ನಲಾಗಿದೆ.